# ನಾಯಕಿಯ ಮುಗಿಯದ ಇನಿಂಗ್ಸ್

ಹಣೆ ಮೇಲೆ ಕಾಸಗಲ ಕುಂಕುಮ. ಆಕಾರ ಮೊದಲಿನಂತೆ ಇಲ್ಲದ ಶರೀರದ ಕುರಿತು ತತ್ತ್ವನುಡಿ. ಜಿಮ್‌ನಲ್ಲಿ ಮತ್ತೆ ಮತ್ತೆ ಹರಿಸಿದ ಬೆವರ ಹನಿಗಳ ಲೆಕ್ಕ. ಮಕ್ಕಳು ಎದೆಮಟ್ಟ ಬೆಳೆಯುತ್ತಿರುವುದಕ್ಕೆ ಹೆಮ್ಮೆ. ಮೊದಲಿನ ಫಾರ್ಮ್‌ನಲ್ಲಿ ಸಿನಿಮಾಗಳನ್ನು ಮಾಡಲು ಆಗುತ್ತಿಲ್ಲವಲ್ಲ ಎಂಬ ವಿಷಾದ... ಹೀಗೆಲ್ಲ ವ್ಯಕ್ತಗೊಂಡ ನಟಿ ಒಂದು ಕಾಲದ ಸೂಪರ್ ಸ್ಟಾರ್. ತನ್ನ ಜೊತೆ ಪ್ರಾಣಿಯೊಂದು ನಟಿಸಿದರೂ ಚಿತ್ರ ಗೆಲ್ಲುತ್ತದೆ ಎನ್ನುವಷ್ಟು ಆತ್ಮವಿಶ್ವಾಸವಿದ್ದವರು. ಅವರ ಕಾಲ್ ಷೀಟ್ ಮೊದಲು ಪಡೆದು, ಆಮೇಲೆ ನಾಯಕನನ್ನು ಬುಕ್ ಮಾಡಿಕೊಳ್ಳುತ್ತಿದ್ದ ಸಂದರ್ಭವೂ ಇತ್ತು.

ರಾಜ್‌ಕುಮಾರ್ ಕುಟುಂಬದ ಬ್ಯಾನರ್ ಪರಿಚಯಿಸಿದ ತಾರೆ. ಪ್ರತಿಭೆಯ ಬಲವೂ ಉಂಟು. ಈಜುಕೊಳದಿಂದ ಮೇಲೆದ್ದು ಬಂದ ದೃಶ್ಯವೊಂದನ್ನು ನೆನೆದೂ ನೆನೆದೂ ರಾತ್ರಿ ಬೆವೆತ ಅಭಿಮಾನಿಗಳಿಗೆ ಲೆಕ್ಕವಿಲ್ಲ. ಅಂಥವರ ಪ್ರೇಮಪತ್ರಗಳನ್ನು ಓದುವಾಗ ಹೆಮ್ಮೆಯ ಜೊತೆಗೆ ಭಯವೂ ಆಗುತ್ತಿತ್ತಂತೆ. ಹಂತ ಹಂತವಾಗಿ ಜನಪ್ರಿಯತೆ ನಿಭಾಯಿಸುವುದನ್ನು ಕಲಿತುದಾಗಿ ಅವರು ಹೇಳಿಕೊಂಡಿದ್ದರು. ಯಶಸ್ಸಿನ ಪುಲಕದ ಕ್ಷಣಗಳನ್ನು ನೆನೆಯುವಾಗ ಮುಖದಲ್ಲಿ ಸಾರ್ಥಕ್ಯ. ಆದರೆ, ಅವರ ಕನ್ನಡ ಮಾತ್ರ ಸುಧಾರಿಸಲಿಲ್ಲ. 'ಲ' ಕಾರ ಹಾಗೂ 'ಳ' ಕಾರದ ಸಮಸ್ಯೆ ನೀಗಿಕೊಳ್ಳುವುದು ಅವರಿಗೆ ಕಷ್ಟ. ಕೆಲವು ಪದಗಳ ಉಚ್ಚಾರದಲ್ಲಿ ಆಭಾಸವಾದರೆ ಅವರು ಕಸಿವಿಸಿಗೊಳ್ಳುವುದಿಲ್ಲ. ತಮ್ಮ ಮಿತಿ ಅವರಿಗೆ ಚೆನ್ನಾಗಿ ಗೊತ್ತು. ನಟಿಯಾಗಿ ಯಶಸ್ಸು ಪಡೆದದ್ದರಲ್ಲಿ ಡಬ್ಬಿಂಗ್ ಕಲಾವಿದೆಯ ಪಾಲೂ ಇದೆ ಎನ್ನುವುದು ಅಭಿಮಾನಿಗಳಿಗೂ ತಿಳಿದಿದೆ.

ಸಂಸಾರ, ಮಕ್ಕಳ ಉಸಾಬರಿ ಎರಡೂ ಅವರ ದೇಹಾಕಾರವನ್ನು ಸಹಜವಾಗಿಯೇ ಬದಲಾಯಿಸಿತು. ದೇಹ ದಪ್ಪಗಾದ ಮೇಲೆ ಗ್ಲಾಮರಸ್ ಪಾತ್ರಗಳಿಂದ ವಿಮುಖರಾಗಿ, ಸಾಹಸೀ ಪಾತ್ರಗಳಲ್ಲಿ ನಟಿಸತೊಡಗಿದರು. ಪೊಲೀಸ್ ಖಾಕಿ ಅವರಿಗೆ ಒಪ್ಪಿತು. ಸ್ಟಂಟ್‌ಗಳನ್ನು ಮಾಡಲೂ ಹಿಂದೇಟು ಹಾಕಲಿಲ್ಲ. 'ಕನಸಿನ ತಾರೆ' ಎಂಬ ಬಿರುದು ತಮಗೆ ಬಂದ ಕುರಿತೂ ಅವರಿಗೆ ಹೆಮ್ಮೆ.

ಅಭಿನಯದಿಂದ ನಿವೃತ್ತಿಯಾಗುವ ಬಗೆಗೆ ಅಪ್ಪಿತಪ್ಪಿಯೂ ಮಾತನಾಡುವುದಿಲ್ಲ. ಪತಿಗೆ ಚಿತ್ರ ನಿರ್ಮಿಸುವ ಶಕ್ತಿ ಈಗಲೂ ಇದೆ. ದಶಕಗಳ ಹಿಂದೆಯೇ 'ಕೋಟಿ ನಿರ್ಮಾಪಕ' ಎಂದೆನಿಸಿಕೊಂಡ ಅವರದ್ದು ರಾಮನಂಥ ವ್ಯಕ್ತಿತ್ವ ಎನ್ನುವುದು ನಟಿಯ ಹೆಮ್ಮೆ. 'ಕನಸಿನ ತಾರೆ' ನಟಿಸುವುದನ್ನು ಮುಂದುವರಿಸಿದ್ದಾರೆ. ಎಲ್ಲ ಒತ್ತಡಗಳ ನಡುವೆಯೂ ಅವರು ವರ್ಷಕ್ಕೋ ಎರಡು ವರ್ಷಕ್ಕೋ ತೆರೆಮೇಲೆ ಮುಖ್ಯಪಾತ್ರದಲ್ಲಿ ಕಾಣಿಸಿಕೊಳ್ಳಲೇಬೇಕು ಎಂದು ಸಂಕಲ್ಪ ತೊಟ್ಟಿದ್ದಾರೆ.

ಈಗ ಅವರ ಹೊಸ ಚಿತ್ರ ಬಿಡುಗಡೆಗೆ ಸಿದ್ಧವಾಗಿದೆ. ಅದರಲ್ಲಿ ಸಾಹಸಕ್ಕಿಂತ ಹಾಸ್ಯ ಹೆಚ್ಚಾಗಿದೆಯಂತೆ. ಜನಪ್ರಿಯತೆಯ ಪ್ರಭಾವಳಿ ಎಷ್ಟು ದೊಡ್ಡದು ಎಂದೆನಿಸುವುದು ಇಂಥ ನಟಿಯರನ್ನು ಕಂಡಾಗಲೇ.

● **ವಿಶಾಖ ಎನ್.**

Printed and Published by B.A. Ravi on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: **K.N. SHANTH KUMAR.**

Editorial Office: 75, M.G Road, Bengaluru-560 001 E-mail:editormy@mayura.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68